4) ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲಾಗುವುದು,

5) ಕೆಲವ ವಿಶೇಷ ಪ್ರಕರಣಗಳಲ್ಲಿ 1ಲಕ್ಷ ರೂ.ಗಳ ಪರಿಹಾರ (ಎಕ್ಸ್‌ಗ್ರೇಷಿಯಾ)ವನ್ನು ನೀಡಲಾಗಿರುತ್ತದೆ.

III. ಸರ್ಕಾರಿ ಸೇವೆಯಲ್ಲಿರುವಾಗ ಮರಣ ಹೊಂದಿದ ಪ್ರಕರಣಗಳಲ್ಲಿ :

1) ಜಾರಿಯಲ್ಲಿರುವ ಕೆ.ಸಿ.ಎಸ್.ಆರ್. ನಿಯಮದ ಪ್ರಕಾರ ಕುಟುಂಬ ವಿಶ್ರಾಂತಿ ವೇತನ ಹಾಗೂ ಇತರ ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದು,

2) ಪ್ರಸ್ತುತ ಜಾರಿಯಲ್ಲಿರವ ನಿಯಮಗಳ ಪ್ರಕಾರ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲಾಗುವುದು.

3) ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಪೋಲೀಸ್ ಕಾನ್ಸ್‌ಟೇಬಲ್, ಹೆಡ್‌ಕಾನ್ಸ್‌ಟೇಬಲ್ ಹಾಗೂ ಫಾಲೋಯರ್ಸ್‌ಗಳಿಗೆ 1 ಲಕ್ಷಗಳ ಪರಿಹಾರ ನೀಡಲಾಗುವುದು.

ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ

290 (511) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರ ನಂತರ ಸೇರಿ 10 ವರ್ಷಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರನ್ನು ಖಾಯಂ ಮಾಡಬೇಕೆಂದು ಉಚ್ಚ ನ್ಯಾಯಾಲಯದ ಆದೇಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದರೆ, ವಯೋಮಿತಿ ಮೀರುತ್ತಿರುವ ಇವರನ್ನು ಎಂದಿನಿಂದ ಖಾಯಂ ಮಾಡಲಾಗುವುದು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿ) :

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಕುರಿತು ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ. 12610:93 ಮತ್ತು 28248-449:98 ರಲ್ಲಿದಿನಾಂಕ 22-9-98ರಂದ ಆದೇಶ ನೀಡಿದೆ. ಮೇಲ್ಕಂಡ ಆದೇಶದಲ್ಲಿ, ಕಾನೂನಿನ ಪ್ರಕಾರ ಹಾಗೂ ಇಂತಹದೇ ಪ್ರಕರಣಗಳಲ್ಲಿ ಸರ್ವೋನ್ನತ ನ್ಯಾಯಾಲಯದ ತೀರ್ಪನನ್ವಯ ಅರ್ಜಿದಾರರ ಪ್ರಕರಣಗಳನ್ನು ಸಕ್ರಮಗೊಳಿಸುವ ಬಗ್ಗೆ ಪರಿಗಣಿಸುವಂತೆ ಆದೇಶಿಸಲಾಗಿದೆ. ಸದರಿ ಆದೇಶದ ವಿರುದ್ಧ ಸರ್ಕಾರವು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದೆ. ನ್ಯಾಯಾಲಯವು ಮೇಲ್ಮನವಿಯನ್ನು ಅಡ್‌ಮಿಟ್ ಮಾಡಿದೆ. ಈ ಅಪೀಲು ನ್ಯಾಯಾಲಯದಲ್ಲಿ ಬಾಕಿ ಇದೆ.

ಆ) ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.